ತಾಲ್ಲೂಕಿಗಳಲ್ಲಿ ಪ್ರಕಟವಾಗುವ ಪತ್ರಿಕೆಗಳಿಗೆ ಪ್ರತಿ ತಿಂಗಳು ಕನಿಷ್ಠ ಒಂದು ಪುಟ ವಿಶೇಷ ಜಾಹೀರಾತು ಮಾಡಲು ಅವಕಾಶ ಕಲ್ಪಿಸಿದ್ದೇವೆ; ಪರಿಶಿಷ್ಟ ಜಾತಿ ಮತ್ತು ಪಂಗಡದ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರತಿ ತಿಂಗಳು ಕನಿಷ್ಠ ಒಂದು ಪುಟ ವಿಶೇಷ ಜಾಹೀರಾತು ಬಿಡುಗಡೆ ಮಾಡಲು ಶಿಫಾರಸ್ಸು ಮಾಡಿದ್ದೇವೆ; ಮತ್ತು ಅನುದಾನ ಲಭ್ಯತೆಗೆ ಅನುಗುಣವಾಗಿ ಜಾಹೀರಾತು ಪ್ರಮಾಣವನ್ನು ನಿರ್ಧರಿಸುವುದು. 25 ವರ್ಷ ಮೇಲ್ಪಟ್ಟು ಸೇವೆ ಸಲ್ಲಿಸಿರುವ ಪತ್ರಿಕೆಗಳ ಸೇವಾ ಹಿರಿತನವನ್ನು ಪರಿಗಣಿಸಿ ಸೂಕ್ತ weightage ನೀಡಿ ಅವರಿಗೆ ಜಾಹೀರಾತು ಜಾಸ್ತಿ ಕೊಡಬೇಕೆಂದು ಮಾಡಿದ್ದೇವೆ. ಈ ರೀತಿ ನಾವು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಕೆ.ಆರ್ ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಚರ್ಚೆ ಮಾಡುವುದಿಲ್ಲ. ಮಾನ್ಯ ಮಂತ್ರಿಗಳಿಗೆ ಇಷ್ಟೇ ಹೇಳುತ್ತೇನೆ. ಸ್ಥಳೀಯ ಮಟ್ಟದಲ್ಲಿ ಪ್ರಾಮಾಣಿಕವಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡ ತಕ್ಕಂಥವರು, ಇಷ್ಟೆಲ್ಲಾ ನಿರ್ಣಯ ತೆಗೆದುಕೊಂಡು last year ನಿಂದ pending ಇಟ್ಟಿದ್ದೀರಿ. ದಯಮಾಡಿ ನಿಮ್ಮ ಕಛೇರಿಯಲ್ಲಿ ಒಂದು ಸಭೆ ಕರೆದು, ಯಾವ ಸಂಘಟನೆಗಳಿವೆ, ಅವರಿಗೆ ಆ ರಿಲೀಫ್ ಮುಟ್ಟುವ ರೀತಿ ಮಾಡಿದರೆ it will be more useful.

ಶ್ರೀ ಆರ್.ರೋಷನ್‌ಬೇಗ್: ಮಾನ್ಯ ಅಧ್ಯಕ್ಷರೆ, ಅವರು ಏನು ಸಜೆಷನ್ ಕೊಟ್ಟಿದ್ದಾರೆ, ಆಪ್ರಕಾರ ನಾನು ಕೂಡಲೇ ಮೀಟಿಂಗ್ ಮಾಡುತ್ತೇನೆ.

12. ವಿಷಯ: ಮೇಲ್ದಜೆಗೇರಿಸಿರುವ ಆಸ್ಪತ್ರೆ ಸಿಬ್ಬಂದಿಗಳಿಗೆ ಸಂಬಳ ನೀಡುವ ಬಗ್ಗೆ

ಶ್ರೀ ಬಸವರಾಜ ಬೊಮ್ಮಾಯಿ (ಶಿಗ್ಗಾಂವ್): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ ಒಂಬತ್ತು ಆಸ್ಪತ್ರೆಗಳು ನೂರು ಹಾಸಿಗೆಗಳ ಮೇಲ್ದರ್ಜೆಗೆ ಏರಿಸಲಾಗಿದೆ, ಅವುಗಳು ಆದತಕ್ಷಣ ಜಿಲ್ಲಾ ಪಂಚಾಯಿತಿ ಸೆಕ್ಟರ್‌ನಿಂದ ಸ್ಟೇಟ್‌ಸೆಕ್ಟರ್‌ಗೆ ಬಂದುಬಿಡುತ್ತದೆ. ಹಾಗಾಗಿ ಅವರಿಗೆ ಜಿಲ್ಲಾ ಪಂಜಾಯಿತಿಯಲ್ಲಿ ಮಾರ್ಚ್‌ನಿಂದ ಸಂಬಳವಾಗಿಲ್ಲ. State sectorನಲ್ಲಿ ಡಾಕ್ಟರಗಳಿಗೆ, ಸ್ಟಾಫ್‌ಗೆ, ಪ್ಯಾರಾ ಮೆಡಿಕಲ್ ಸ್ಟಾಫ್‌ಗೆ, ನರ್ಸ್‌ಗಳಿಗೆ ಸಂಬಳ

ಕೊಡಬೇಕಾಗಿತ್ತು ಅವರಿಗೆ ಸಂಬಳಕೊಟ್ಟಿಲ್ಲ. ನಮ್ಮ ಕ್ಷೇತ್ರ ಹರಪನಹಳ್ಳಿ ಹಾಗೂ ರಾಜ್ಯದಲ್ಲಿ ವಿವಿಧ ಒಂಬತ್ತು ತಾಲ್ಲೂಕುಗಳಲ್ಲಿ. ಇದರ ಬಗ್ಗೆ ಎರಡು ಮೂರು ಬಾರಿ ಹಣಕಾಸು ಇಲಾಖೆಗೆ ಪ್ರಸ್ತಾವನೆ ಹೋಗಿ ವಾಪಸ್ಸು ಬಂದಿದೆ. ಈಗ ಮತ್ತೆ ಹಣಕಾಸು ಇಲಾಖೆಗೆ ಪ್ರಸ್ತಾವನೆ ಹೋಗಿದೆ. ಅವರಿಗೆ ಸಂಬಳ ಬಿಡುಗಡೆ ಮಾಡುವುದಕ್ಕೆ ತಾವು ಪ್ರಸ್ತಾವನೆಯನ್ನು ಜರುಗಿಸಬೇಕು. ಆಸ್ಪತ್ರೆಯ ದಿನನಿತ್ಯ ಖರ್ಚುಗಳಿಗೆ ಅವರ ಫಂಡ್ ಏನಿದೆ, ಅದು ಬಿಟ್ಟರೆ ಮತ್ತೇನೂ ಇಲ್ಲ. ಅವರಿಗೆ ಕರೆಂಟ್ ಬಿಲ್ ಕೊಡುವುದು ಕಷ್ಟವಾಗಿದೆ ಹಾಗೂ ಅಲ್ಲಿರುವಂತಹ ರೋಗಿಗಳಿಗೆ ತೊಂದರೆ ಯಾಗಿದೆ. ದಯವಿಟ್ಟು ನೀವೇ personally intervene ಆಗಿ ಅಧಿಕಾರಿಗಳಿಗೆ ಸೂಚನೆ ಕೊಟ್ಟ ಸ್ಯಾಲರಿ ರಿಲೀಸ್ ಮಾಡುವುದಕ್ಕೆ state sector ನಲ್ಲಿ ಕೊಡಬೇಕೆಂದು ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿದ್ದೀರಿ. It is a budgeted money. ಅದು ಬೇರೆ ಏನೂ ಇಲ್ಲ. ಅದನ್ನು ರಲೀಜ್ ಮಾಡುವುದಕ್ಕೆ ಹಣಕಾಸು ಇಲಾಖೆಗೆ ತಾವು personally intervene ಆಗಿ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಹಿಂದೆ ಇದೇ ರೀತಿ ಆದಾಗ ಬಾಗಲಕೋಟೆ ಮೂರು ಆಸ್ಪತ್ರೆಯ ವಿಚಾರಕ್ಕೆ ಸಂಬಂಧಪಟ್ಟಂತೆ ಸಪರೇಟ್ ಆಜ್ಞೆ ಮಾಡಿ ಮಾಡಿರುವಂತಹ ಉದಾಹರಣೆ ಇದೆ. ಆ ಪ್ರಕಾರ ದಯವಿಟ್ಟು ತಾವು ಮಾಡಬೇಕೆಂದು ಕೇಳೀಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಸ್ಯಾಲರಿ ಬಿಡುಗಡೆ ಮಾಡಿ ಸೋಣ ಬಿಡಿ. ಸ್ಯಾಲರಿ ಬಿಡುಗಡೆ ಮಾಡಿಸುತ್ತೇವೆ.

ಅಧ್ಯಕ್ಷರು: ಅವರು ಬಿಡುಗಡೆ ಮಾಡುತ್ತೇವೆಂದು ಹೇಳಿದರಲ್ಲ?

ಶ್ರೀ ಗೋವಿಂದ ಎಂ. ಕಾರಜೋಳ : ತೊಂದರೆ ಆಗಿರುವುದನ್ನು ಹೇಳಿಬಿಡುತ್ತೇನೆ.

ಅಧ್ಯಕ್ಷರು : ಸಂಬಳ ಕೊಡದಿದ್ದರೆ ಊಟ ಸಿಗುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : 2014ರಿಂದ 100 ಬೆಡ್‌ಗೆ ಅಪ್‌ಗ್ರೇಡ್ ಆಗಿದೆ. ಅಲ್ಲಿರುವಂತಹ ಸಿಬ್ಬಂದಿಗೆ ಸಂಬಳವಾಗಿಲ್ಲ. ಮುಧೋಳ ಭಾಗದಲ್ಲಿ ಬರುವ ಹಾನಗಲ್ಲು ಸೇರಿಸಿ ಸುಮಾರು ಹತ್ತು ಆಸ್ಪತ್ರೆಗಳಿವೆ.

ದಯವಿಟ್ಟು ಕೂಡಲೇ ಅವರಿಗೆ ಸಂಬಳ ಕೊಡಿಸುವ ಕೆಲಸವಾಗಬೇಕು. ತಾವು ಹೇಳುತ್ತೀರಿ, ಆದರೆ ಹಣಕಾಸು ಇಲಾಖೆಯಲ್ಲಿ ಬೇಗ ಆಗುವುದಿಲ್ಲ. ಬಹಳ ಕಷ್ಟದ ಕೆಲಸ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಜಗದೀಶ್ ಶೆಟ್ಟರ್‌ರವರು ಮತ್ತು ಮಾನ್ಯ ಪುಟ್ಟಣ್ಣಯ್ಯನವರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಇದನ್ನು ಬೇಡಿಕೆಯ ಮೇಲೆ ಚರ್ಚೆಯಾದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವದ ವಿಚಾರವಾಗಿದೆ. ನಾವು ಬೇಡಿಕೆಯ ಮೇಲೂ ಮಾತನಾಡೋಣ. ಇವತ್ತು ರೈತರ ಮೇಲೆ ಗೋಲಿಬಾರ್ ಆಗಿದೆ, ಗುಂಡು ಹಾಕಿದ್ದಾರೆ.

ಅಧ್ಯಕ್ಷರು : ಈ ವಿಷಯವನ್ನು ಇವತ್ತೇ ತೆಗೆದುಕೊಳ್ಳೋಣ, ಮೊನ್ನೆಯೂ ಬೇಡಿಕೆ ಮೇಲೆ ಚರ್ಚೆಯಾಗಿಲ್ಲ.

ಶ್ರೀ ಆರ್.ಅಶೋಕ್ : ಮಾನ್ಯ ಅಧ್ಯಕ್ಷರೆ, ಈಗ ಪ್ರಸ್ತಾವನೆ ಮಾಡಲಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಧ್ಯಾಹ್ನ 3 ಗಂಟೆಗೆ ಕಂದಾಯ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡೋಣ. ಈ ವಿಷಯವನ್ನು ಅಷ್ಟರೊಳಗೆ ಪ್ರಸ್ತಾಪ ಮಾಡುತ್ತೇವೆ. ಇದರ ಬಗ್ಗೆ ಸರ್ಕಾರದ ನಿಲುವು ಏನಿದೆಯೆಂಬುದನ್ನು ಹೇಳಲಿ, ಏಕೆಂದರೆ, ಇದು ಬಹಳ ಮಹತ್ವದ ವಿಚಾರವಾಗಿದೆ. ನಾವು ಈ ವಿಷಯವನ್ನು ನಿಲುವಳಿ ಸೂಚನೆ ಮುಖಾಂತರ ತಂದಿದ್ದೇವೆ.

ಅಧ್ಯಕ್ಷರು : ಆಯಿತು, ಇದನ್ನು ನಿಲುವಳಿ ಸೂಚನೆ ಬದಲಾಗಿ ನಿಯಮ 69ಗೆ convert ಮಾಡಿ, ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಆಯಿತು.